ಕುವೆಂಪು ವಿಶ್ವವಿದ್ಯಾನಿಲಯ

**ರಾಷ್ಟ್ರೀಯ ಸೇವಾ ಯೋಜನೆ**

**ಪಿಇಎಸ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಮ್ಯಾನೇಜ್‌ಮೆಂಟ್ ಸ್ಟಡೀಸ್**

ಎನ್ ಹೆಚ್ 206, ಸಾಗರ ರಸ್ತೆ, ಶಿವಮೊಗ್ಗ – 577 204 (ಕರ್ನಾಟಕ)

(ಕುವೆಂಪು ವಿಶ್ವವಿದ್ಯಾನಿಲಯದ ಸಂಯೋಜನೆಗೊಳಪಟ್ಟಿದೆ ಮತ್ತು ಕರ್ನಾಟಕ ಸರ್ಕಾರದ ಮಾನ್ಯತೆ ಪಡೆದಿದೆ)

ದೂರವಾಣಿ : 08182 640772, 640812, 640806, ವೆಬ್‌ಸೈಟ್: www.pestrust.edu.in/pesiams

## 2016–17ನೇ ರಾ.ಸೇ.ಯೋ ವಾರ್ಷಿಕ ವಿಶೇಷ ಶಿಬಿರದ ವರದಿ
## ದಿನಾಂಕ: 17–03–2017 ರಿಂದ 23–03–2017

**ದಿನಾಂಕ 17–03–2017**ರಂದು ಶಿವಮೊಗ್ಗ ಜಿಲ್ಲೆಯ ಉಂಬಳೇಬೈಲು ಗ್ರಾಮದಲ್ಲಿ ಪಿಇಎಸ್ಐಎಎಂಎಸ್ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕದ ವತಿಯಿಂದ ಆಯೋಜಿಸಲಾದ ವಾರ್ಷಿಕ ವಿಶೇಷ ಶಿಬಿರವನ್ನು ಕುವೆಂಪು ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಸಂಯೋಜನಾಧಿಕಾರಿಗಳಾದ ಡಾ. ಕುಂದನ್ ಬಸವರಾಜ್ ರವರು ಉದ್ಘಾಟಿಸಿದರು. ಶ್ರೀಮತಿ ಹೇಮಾವತಿ ಶಿವನಂಜಪ್ಪ, ಜಿಲ್ಲಾ ಪಂಚಾಯತ್ ಸದಸ್ಯರು, ಸಮಾರಂಭದ ಅತಿಥಿಯಾಗಿದ್ದರು. ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎಸ್. ಆರ್. ನಾಗರಾಜ್ ರವರು ವಹಿಸಿದ್ದರು. ರಾಷ್ಟ್ರೀಯ ಸೇವಾ ಯೋಜನಾ ಕಾರ್ಯಕ್ರಮಾಧಿಕಾರಿ ಶ್ರೀ ಮೋಹನ್ ಡಿ ಶಿಬಿರದ ಯೋಜನೆಗಳನ್ನು ವಿವರಿಸಿದರು. ಈ ಕಾರ್ಯಕ್ರಮದಲ್ಲಿ ಸರ್ಕಾರಿ ಪ್ರೌಢಶಾಲೆಯ ಮುಖ್ಯೋಪಾದ್ಯಾಯರಾದ ಶ್ರೀ ಮಹೇಶ್ವರಪ್ಪ, ಗ್ರಾಮದ ಮುಖಂಡರು ಮತ್ತು ಸ್ವಯಂ ಸೇವಕರುಗಳು ಉಪಸ್ಥಿತರಿದ್ದರು.



**ದಿನಾಂಕ: 18–03–2017**ರ (ಶಿಬಿರದ ಎರಡನೇ ದಿನ) ಮುಂಜಾನೆ ಶ್ರೀ ಬಿಷ್ಟೆ ಗೌಡ್ರು ಸದಸ್ಯರು, ಗ್ರಾಮ ಪಂಚಾಯಿತಿ, ಉಂಬಳೇಬೈಲು ಗ್ರಾಮ, ಇವರು ಸರ್ಕಾರಿ ಪ್ರೌಢ ಶಾಲಾ ಆವರಣದಲ್ಲಿ ಧ್ವಜಾರೋಹಣ ನೆರವೇರಿಸಿದರು. ನಂತರ ಶಿಬಿರಾರ್ಥಿಗಳು ಯೋಗಾಭ್ಯಾಸ ನಡೆಸಿದರು.





ಶಂಕರ ಕಣ್ಣಿನ ಆಸ್ಪತ್ರೆ, ಶಿವಮೊಗ್ಗ ಇವರ ಸಹಯೋಗದೊಂದಿಗೆ "ಕಣ್ಣಿನ ತಪಾಸಣೆ" ಶಿಬಿರವನ್ನು ಏರ್ಪಡಿಸಲಾಗಿತ್ತು. ಇದರಲ್ಲಿ 65 ಜನರು ಇದರ ಸದುಪಯೋಗವನ್ನು ಪಡೆದುಕೊಂಡರು.

Principal
PES Institute of Advanced Management Studies
NH 206, Sagar Road
SHIVAMOGGA-577 204





PES INSTITUTE OF ADVANCED MANAGEMENT STUDIES * SHIVAMOGGA

ಸ್ವಯಂ ಸೇವಕರುಗಳು ಸರ್ಕಾರಿ ಹಿರಿಯ ಪ್ರಾರ್ಥಮಿಕ ಶಾಲೆ ಹಾಗೂ ಶ್ರೀ ವಿರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿ ಶ್ರಮದಾನ ಮಾಡಿದರು. ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಡಾ. ಎಸ್. ಕಲ್ಲಪ್ಪ, ಸಹಾಯಕ ನಿರ್ದೇಶಕರು, ಪಶು ಸಂಗೋಪನಾ ಇಲಾಖೆ, ಸಾಗರ ವಿಭಾಗ, ಶಿವಮೊಗ್ಗ ಇವರು ಹಾಜರಿದ್ದರು. ಹಾಗೂ ಸ್ವಯಂ ಸೇವಕರುಗಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

**ದಿನಾಂಕ: 19–03–2017ರ (ಮೂರನೇ ದಿನ)** ಮುಂಜಾನೆ ಶ್ರೀ ಶಿವಕುಮಾರ್ ಸದಸ್ಯರು, ಗ್ರಾಮ ಪಂಚಾಯಿತಿ, ಉಂಬಳೇಬೈಲು ಗ್ರಾಮ, ಇವರು ಸರ್ಕಾರಿ ಪ್ರೌಢ ಶಾಲಾ ಆವರಣದಲ್ಲಿ ಧ್ವಜಾರೋಹಣ ನೆರವೇರಿಸಿದರು.

ಡಾ॥ ಅಶೋಕ್ ಕುಮಾರ್, ಪ್ರಾಂಶುಪಾಲರು, ಪಿಇಎಸ್‌ಐಟಿಎಂ ಕಾಲೇಜು ಇವರು **"ಪಕ್ಷಿ ವೀಕ್ಷಣೆ ಮತ್ತು ಛಾಯಾಚಿತ್ರ ಕೌಶಲ್ಯಗಳು"** ಕುರಿತು ಮಾತನಾಡುತ್ತ ವಿವಿಧ ಪಕ್ಷಿಗಳನ್ನು ಹೇಗೆ ಗುರುತಿಸುವುದು, ಅವುಗಳ ಜೀವನ ಕ್ರಮ, ಅವುಗಳು ಗೂಡು ಕಟ್ಟುವ ವಿಧಾನ, ಪರಿಸರಕ್ಕೆ ಅವುಗಳ ಕೊಡುಗೆ ಬಗ್ಗೆ ವಿದ್ಯಾರ್ಥಿಗಳಿಗೆ ಸಮಗ್ರ ಮಾಹಿತಿ ನೀಡಿದರು. ಗ್ರಾಮದ ವಿವಿಧ ಕಡೆಗಳಲ್ಲಿ ಶಿಬಿರಾರ್ಥಿಗಳನ್ನು ಕರೆದುಕೊಂಡು ಹೋಗಿ ಪಕ್ಷಿಗಳನ್ನು ಹೇಗೆ ಗುರುತಿಸುವುದು ಹಾಗೂ ಅವುಗಳ ಚಲನವಲನಕ್ಕೆ ತೊಂದರೆಯಾಗದಂತೆ ಛಾಯಾಚಿತ್ರವನ್ನು ಹೇಗೆ ತೆಗೆಯಬೇಕು ಎಂದು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದರು. ನಂತರ ಸ್ವಯಂ ಸೇವಕರುಗಳು ಗ್ರಾಮದ ಹಿಂದುಳಿದ ಕಾಲೋನಿಗಳಲ್ಲಿ ಶ್ರಮದಾನ ಮಾಡಿ ಸ್ವಚ್ಛಗೊಳಿಸಿದರು.





ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಡಾ॥ ವಿ.ಎಲ್.ಎಸ್ ಕುಮಾರ್, ಕಾರ್ಯದರ್ಶಿಗಳು, ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ಶಿವಮೊಗ್ಗ ಇವರು ನೈಸರ್ಗಿಕ ವಿಕೋಪಗಳು ಹಾಗೂ ನಿರ್ವಹಣೆ ಕುರಿತು ಮಾತನಾಡುತ್ತಾ ಅಪಘಾತಗಳು ಸಂಭವಿಸದಂತೆ ವಹಿಸಬೇಕಾದ ಮುಂಜಾಗ್ರತೆ, ಅಪಘಾತ ನಡೆದಾಗ ಕೈಗೊಳ್ಳಬೇಕಾದ ಪ್ರಥಮ ಚಿಕಿತ್ಸೆ, ನೀರಿನಿಂದ ಉಂಟಾಗುವ ಅಪಾಯಗಳು ಹಾಗೂ ತೆಗೆದುಕೊಳ್ಳಬೇಕಾದ ಕ್ರಮಗಳು ಹಾಗೂ ಅರಣ್ಯಕ್ಕೆ ಬೆಂಕಿ ಬೀಳದಂತೆ ತಡೆಗಟ್ಟುವ ಕ್ರಮಗಳ ಬಗ್ಗೆ ಸಮಗ್ರ ಮಾಹಿತಿ ನೀಡಿದರು. ನಂತರ ಸ್ವಯಂ ಸೇವಕರುಗಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

Principal
PES Institute of Advanced Management Studies
NH 206, Sagar Road
SHIVAMOGGA-577 204



PES INSTITUTE OF ADVANCED MANAGEMENT STUDIES * SHIVAMOGGA

**ದಿನಾಂಕ: 20–03–2017ರ (ನಾಲ್ಕನೇ ದಿನ)** ಮುಂಜಾನೆ ಶ್ರೀಮತಿ ಇಂದ್ರಮ್ಮ ಸದಸ್ಯರು, ಗ್ರಾಮ ಪಂಚಾಯಿತಿ, ಉಂಬಳೇಬೈಲು ಗ್ರಾಮ, ಇವರು ಸರ್ಕಾರಿ ಪ್ರೌಢ ಶಾಲಾ ಆವರಣದಲ್ಲಿ ಧ್ವಜಾರೋಹಣ ನೆರವೇರಿಸಿದರು. ನಂತರ ಶಿಬಿರಾರ್ಥಿಗಳು ಯೋಗಾಭ್ಯಾಸ ನಡೆಸಿದರು. ಸ್ವಯಂ ಸೇವಕರುಗಳು ಶ್ರೀ ಉಂಬಳೇಶ್ವರ ದೇವಸ್ಥಾನ ಆವರಣ ಹಾಗೂ ಸುತ್ತಮುತ್ತಲಿನ ಬೀದಿಗಳನ್ನು ಸ್ವಚ್ಛಗೊಳಿಸಿದರು.

ಪಶುಸಂಗೋಪನಾ ಇಲಾಖೆ, ಶಿವಮೊಗ್ಗ ಸಹಯೋಗದೊಂದಿಗೆ ಜಾನುವಾರು ತಪಾಸಣೆ ಶಿಬಿರವನ್ನು ಆಯೋಜಿಲಾಗಿತ್ತು. ಈ ಶಿಬಿರದಲ್ಲಿ 36 ಜಾನುವಾರುಗಳ ತಪಾಸಣೆ ಹಾಗೂ ಲಸಿಕೆ ಕಾರ್ಯಕ್ರಮ ನಡೆಯಿತು.
ನಂತರ ಸ್ವಯಂ ಸೇವಕರುಗಳು ಗ್ರಾಮಪಂಚಾಯಿತಿ, ಪೋಲೀಸ್ ಠಾಣೆ ಮತ್ತು ಸಮುದಾಯ ಭವನದ ಆವರಣಗಳಲ್ಲಿ ಶ್ರಮದಾನ ಮಾಡಿ ಸ್ವಚ್ಛಗೊಳಿಸಿದರು.




ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಡಾ. ಸುರೇಶ್, ಪ್ರಾಧ್ಯಾಪಕರು, ಇಲೆಕ್ಟ್ರಾನಿಕ್ಸ್ ಅಂಡ್ ಕಮ್ಯೂನಿಕೇಶನ್ ವಿಭಾಗ, ಮತ್ತು ಸಹಸಂಚಾಲಕರು, ಚಿರಂತನ, ಹಸಿರು ತಂತ್ರಜ್ಞಾನ ಕೇತ್ರ, ಜೆ.ಎನ್.ಎನ್.ಸಿ.ಇ ಶಿವಮೊಗ್ಗ ಇವರು ಪರಿಸರ ಸ್ನೇಹಿ ತಂತ್ರಜ್ಞಾನಗಳ ಕುರಿತು ಮಾಹಿತಿ ಮತ್ತು ಪ್ರಾತ್ಯಕ್ಷಿಕೆ ನಡೆಸಿಕೊಟ್ಟರು.




**ದಿನಾಂಕ: 21–03–2017ರ (ಐದನೇ ದಿನ)** ಮುಂಜಾನೆ ಶ್ರೀ ಓಂಕಾರಮೂರ್ತಿ ಸದಸ್ಯರು, ಗ್ರಾಮ ಪಂಚಾಯಿತಿ, ಉಂಬಳೇಬೈಲು ಗ್ರಾಮ, ಇವರು ಸರ್ಕಾರಿ ಪ್ರೌಢ ಶಾಲಾ ಆವರಣದಲ್ಲಿ ಧ್ವಜಾರೋಹಣ ನೆರವೇರಿಸಿದರು. ನಂತರ ಸ್ವಯಂ ಸೇವಕರುಗಳು ಯೋಗಾಭ್ಯಾಸ ನಡೆಸಿ, ಸರ್ಕಾರಿ ಪ್ರೌಢಶಾಲೆ ಮತ್ತು ಅರಣ್ಯ ಇಲಾಖೆ ಆವರಣಗಳಲ್ಲಿ ಶ್ರಮದಾನ ಮಾಡಿ ಸ್ವಚ್ಛಗೊಳಿಸಿದರು.

Principal
PES Institute of Advanced Management Studies
NH 206, Sagar Road
SHIVAMOGGA-577 204

ಸಂಜೆಯ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಶ್ರೀ ಬಿ.ಹೆಚ್ ಮಂಜಪ್ಪ, ಜಂಟಿ ಕೃಷಿ ನಿರ್ದೇಶಕರು, ಇವರು ಕೃಷಿ ಮತ್ತು ತೋಟಗಾರಿಕೆ ಕ್ಷೇತ್ರ ಎದುರಿಸುತ್ತಿರುವ ಪ್ರಸ್ತುತ ಸವಾಲುಗಳು ಹಾಗೂ ಸತತ ಬರಗಾಲಗಳಿಂದ ನಮ್ಮ ಕೃಷಿ ಮತ್ತು ತೋಟಗಾರಿಕೆ ಕ್ಷೇತ್ರ ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿದೆ. ತಂತ್ರಜ್ಞಾನದ ಅಭಿವೃದ್ಧಿಯ ಹೊರತಾಗಿಯೂ ಸಮರ್ಪಕ ಪರಿಹಾರ ಉಪಾಯಗಳು ನಮ್ಮ ರೈತರಿಗೆ ದೊರೆತ್ತಿಲ್ಲ ಎಂದರು.



**ದಿನಾಂಕ: 22-03-2017ರ (ಆರನೇ ದಿನ)** ಮುಂಜಾನೆ ಶ್ರೀಮತಿ ಸುಮಾ ಸದಸ್ಯರು, ಗ್ರಾಮ ಪಂಚಾಯಿತಿ, ಉಂಬಳೇಬೈಲು ಗ್ರಾಮ, ಇವರು ಸರ್ಕಾರಿ ಪ್ರೌಢ ಶಾಲಾ ಆವರಣದಲ್ಲಿ ಧ್ವಜಾರೋಹಣ ನೆರವೇರಿಸಿದರು. ನಂತರ ಸ್ವಯಂ ಸೇವಕರುಗಳು ಯೋಗಾಭ್ಯಾಸ ನಡೆಸಿ ಗ್ರಾಮದ ವಿವಿಧ ಬೀದಿಗಳಲ್ಲಿ ಶ್ರಮದಾನ ಮಾಡಿ ಸ್ವಚ್ಛಗೊಳಿಸಿದರು.

ಸಂಜೆಯ ಸಾಂಸ್ಕೃತಿಕ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಡಾ. ಅನಲಾ, ಸಹ ಪ್ರಾಧ್ಯಾಪಕಿ, ರಾಷ್ಟ್ರೀಯ ಕಾನೂನು ಕಾಲೇಜು ಶಿವಮೊಗ್ಗ ಇವರು ಮಹಿಳೆಯರಿಗೆ ಹಾಗೂ ಗ್ರಾಮಸ್ಥರಿಗೆ ಕಾನೂನಿನ ಅರಿವು ಮೂಡಿಸಿದರು. ನಂತರ ಸ್ವಯಂ ಸೇವಕರುಗಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.



**ದಿನಾಂಕ: 23-03-2017ರ (ಏಳನೇ ದಿನ)** ಮುಂಜಾನೆ ಶ್ರೀಮತಿ ಸುಹಾರ ಬೀಬಿ ಸದಸ್ಯರು, ಗ್ರಾಮ ಪಂಚಾಯಿತಿ, ಉಂಬಳೇಬೈಲು ಗ್ರಾಮ, ಇವರು ಸರ್ಕಾರಿ ಪ್ರೌಢ ಶಾಲಾ ಆವರಣದಲ್ಲಿ ಧ್ವಜಾರೋಹಣ ನೆರವೇರಿಸಿದರು. ನಂತರ ಸ್ವಯಂ ಸೇವಕರುಗಳು ಯೋಗಾಭ್ಯಾಸ ನಡೆಸಿ ಸರ್ಕಾರಿ ಪ್ರೌಢ ಶಾಲೆ ಆವರಣ ಹಾಗೂ ಕಟ್ಟಡದ ಮೇಲ್ಛಾವಣಿಗಳಲ್ಲಿ ಶ್ರಮದಾನ ಮಾಡಿ ಸ್ವಚ್ಛಗೊಳಿಸಿದರು.

ಶಿಬಿರದ ಎರಡು ಮುಖ್ಯ ವೈಶಿಷ್ಟ್ಯಗಳೆಂದರೆ ಶಿಬಿರಾರ್ಥಿಗಳು ಗ್ರಾಮದ ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷೆ ನಡೆಸಿದರು. ಹಾಗೂ ಗ್ರಾಮದ ಸಮಸ್ಯೆಗಳ ಕುರಿತು ವರದಿಯನ್ನು ಸಿದ್ಧಪಡಿಸುತ್ತಿದ್ದಾರೆ ಮತ್ತು ಮನೆ ಮನೆಗಳಿಗೆ ಭೇಟಿ ನೀಡಿ ಗ್ರಾಮಸ್ಥರ ಮೊಬೈಲ್‌ಗಳಲ್ಲಿ ಪೇಟಿಂ ಮತ್ತು ಬೀಮ್ ಆ್ಯಪ್‌ಗಳನ್ನು ಅಳವಡಿಸಿ ಅದರ ಮೂಲಕ ವ್ಯವಹಾರವನ್ನು ನಡೆಸುವ ಬಗೆಯನ್ನು 122 ಗ್ರಾಮಸ್ಥರಿಗೆ ಪ್ರಾತ್ಯಕ್ಷಿಕೆಯ ಮೂಲಕ ತಿಳಿಸಿಕೊಟ್ಟರು.

Principal
PES Institute of Advanced Management Studies
NH 206, Sagar Road
SHIVAMOGGA-577 204




ಶಿಬಿರದ ಸಮಾರೋಪ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಡಾ. ಆರ್. ನಾಗರಾಜ, ಮುಖ್ಯ ಆಡಳಿತ ಸಂಯೋಜನಾಧಿಕಾರಿ, ಪಿಇಎಸ್ ಟ್ರಸ್ಟ್ ಇವರು ನಿರಂತರವಾಗಿ ಅಭಿವೃದ್ಧಿಯ ಸಾಧಿಸುತ್ತಿದ್ದರೂ ಮಾನವ ಅಭಿವೃದ್ಧಿ ಸೂಚ್ಯಂಕದ ಆಧಾರದ ಮೇಲೆ ನೋಡಿದರೆ ಭಾರತದಲ್ಲಿ ಜನರ ಜೀವನಮಟ್ಟ ಇನ್ನೂ ಕೆಳಗಿದೆ. ನಿಜವಾದ ಅರ್ಥದಲ್ಲಿ ಅಭಿವೃದ್ಧಿಯಾಗಬೇಕಾದರೆ ಮಾನವ ಸಂಪನ್ಮೂಲದಲ್ಲಿ ಗುಣಾತ್ಮಕ ಬದಲಾವಣೆ ಆಗಬೇಕು ಎಂದು ನುಡಿದರು. ಹಾಗೂ ಸರ್ಕಾರಿ ಪ್ರೌಢ ಶಾಲಾ ಆವರಣದಲ್ಲಿ ಸಸಿ ನೆಡಲಾಯಿತು.




ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎಸ್.ಆರ್. ನಾಗರಾಜರವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಬಸವರಾಜಪ್ಪ, ಕಾಲೇಜಿನ ರಾ.ಸೇ.ಯೋ ಕಾರ್ಯಕ್ರಮಾಧಿಕಾರಿ ಶ್ರೀ ಮೋಹನ್ ಡಿ ಮತ್ತು ಸಹ ಶಿಬಿರಾಧಿಕಾರಿಗಳಾದ ಶ್ರೀಮತಿ ಕವಿತಾ, ಶ್ರೀ ಪ್ರವೀಣ್, ಶಿಬಿರಾರ್ಥಿಗಳು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

In this Six Day NSS Camp which was held at Umblebylu there were more than 50 students along with the faculty members Mr. Mohan D, Ms. Kavitha, Mr. Praveen, Umbelabylu Primary school Head Master and Village representatives were actively participated. This program was organized by the NSS unit of PESIAMS and NSS volunteers conducted cultural programs during the event.

Principal
PES Institute of Advanced Management Studies
NH 206, Sagar Road
SHIVAMOGGA-577 204